ದಿನಾಂಕಃ 08-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಪಿ ಎಸ್ ಬಿ ವಕೀಲರಿಂದ

ನಾನು ವಾರ್ಡ್ ನಂ. 19 ಡೈಮೆಂಡ್ ಟಾಕೀಸ್ ಹತ್ತಿರ ನಮ್ಮ ಮನೆ ಇರುತ್ತದೆ. ಡೈಮಂಡ್ ಟಾಕೀಸ್ ರೋಡ್ ಗೆ ಚೆಕ್ಕುಬಂದಿ ಗೊತ್ತ ಎಂದರೆ ಪೂರ್ವಕ್ಕೆ ಡೈಮಂಡ್ ಟಾಕೀಸ್ ಇದೆ, ಪಶ್ಚಿಮಕ್ಕೆ ದರ್ಗಾ, ಉತ್ತರ ಮತ್ತು ದಕ್ಷಿಣಕ್ಕೆ ರಸ್ತೆ ಇದೆ. ಡೈಮಂಡ್ ಟಾಕೀಸ್ ರೋಡ್‌ನ ವಿಸ್ತೀರ್ಣ ಗೊತ್ತ ಎಂದರೆ ಗೊತ್ತಿಲ್ಲ. ಅವಶ್ಯಕತೆ ಇಲ್ಲದ ಕಾರಣ ಗೊತ್ತಿಲ್ಲ. ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಗೊತ್ತಿಲ್ಲ. ಆ ರಸ್ತೆಗೆ ಮುನ್ಸಿಪಲ್ ಕಛೇರಿಗೆ ಯಾವ ರಸ್ತೆ ಅಂತ ಇದೆ ಎಂದರೆ ಸುಭಾಶ್ ರಸ್ತೆ. ಡೈಮಂಡ್ ಟಾಕೀಸ್ ರಸ್ತೆ ಅಂತ ಹೇಳಿ ಮುನ್ಸಿಪಲ್ ದಾಖಲೆಗಳಲ್ಲಿ ನಮೂದು ಇಲ್ಲ ಎಂದರೆ ಸರಿ.

ದಾವಾ ಸ್ವತ್ತಿನ ಸರ್ವೆ ನಂ. 1/2. ನಿಮ್ಮ ಮುಖ್ಯ ವಿಚಾರಣೆಯಲ್ಲಿ 1/2 ಅಂತ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸರ್ವೆ ನಂ.1 ವಿಭಜನೆಯಾಗುವ ಪೂರ್ವದಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇತ್ತು ಅಂತ ಗೊತ್ತಿಲ್ಲ. ಒಟ್ಟು ಸರ್ವೆ ನಂಬರ್ ಆಗಿದ್ದಾಗ ಯಾರ ಹೆಸರಿನಲ್ಲಿ ಇತ್ತು ಅಂತ ಗೊತ್ತಿರುವುದಿಲ್ಲ. ಒಟ್ಟು ವಿಸ್ತೀರ್ಣ ಯಾವಾಗ ವಿಭಜನೆಯಾಯಿತು ಅಂತ ಗೊತ್ತಿರುವುದಿಲ್ಲ. ನನಗೆ ಇದಗ್ಲೀಷ್ ಬರುವುದಿಲ್ಲ. ನಿಮ್ಮ ಮಲುಖ್ಯ ವಿಚಾರಣೆಯಲ್ಲಿ ಏನು ಬರೆದಿರುತ್ತಾರೆ ಅಂತ ನೀವು ತಿಳಿದುಕೊಂಡಿರುವುದಿಲ್ಲ ಎಂದರೆ ನಾನು ಹೇಳಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣೆ ಯಲ್ಲಿ ಏನು ಬರೆದಿರುತ್ತಾರೆ ಅಂತ ನಾನು ತಿಳಿದುಕೊಂಡಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಏನು ಕಂದಾಯ ದಾಖಲೆಗಳನ್ನು ನೋಡಿರುತ್ತೀರಿ ಎಂದರೆ ನೋಡಿರುವುದಿಲ್ಲ. ಸುಭಾಶ್ ರಸ್ತೆಯಲ್ಲಿ ನೀವು ವಾಸ ಇರುವ ಮನೆಗೂ ದಾವಾ ಸ್ವತ್ತಿಗೂ ಒಂದೂವರೆ ಕಿ. ಮೀಟರ್ ಅಂತರ ಇದೆ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಚೆಕ್ಕುಬಂದಿ ಇರುವ ದಾಖಲೆಯನ್ನು ನೋಡಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಧಪಟ್ಟಂತೆ ನಿಮಗೆ ಯಾವುದೇ ವಿಚಾರಗಳು ಗೊತ್ತಿಲ್ಲದಿದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪ್ರತಿವಾದಿಗಳಿಗೆ  ತೊಂದರೆ ಮಾಡಬೇಕು ಅಂತ ಹೇಳಿ ವಾದಿ ಬಸವರಾಜ್ ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.